ಬಾವಿಗಳನ್ನು ಹಾಕಿಸಬೇಕೆಂಬ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳತಕ್ಕ ಅಧಿಕಾರವನ್ನು ಆಲ್ಲಿನ ಡೆಪ್ಯುಟಿ ಕಮೀಷನರ್ ಮತ್ತು ಮಾನ್ಯ ತಂಗಳ್ ಅವರಿಗೇ ಬಿಟ್ಟಿದ್ದೇನೆ. ಹೆಚ್ಚು ಕೊಳವೆ ಬಾವಿಗಳನ್ನು ಹಾಕಿ ಆಲ್ಲಿನ ನೀರಿನ ಬವಣೆಯನ್ನು ಕಡಿಮೆ ಮಾಡಲಾಗುವುದೆಂದು ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ.— ಇತ್ತೀಚೆಗೆ ಪಟ್ಟಣಗಳನ್ನು ಮುಂಡಲ್ ಪಂಚಾಯಿತಿಗಳಾಗಿ ಪರಿವರ್ತಿಸಿರುವುದರಿಂದ, ಕೆ. ಯು. ಡಬ್ಲ್ಯು. ಎಸ್. ನವರು ಇಂತಹ ಪಟ್ಟಣಗಳಿಗೆ ನೀರು ಪೂರೈಸುವ ಸಾಧ್ಯತೆ ಇದೆಯೇ?

ಶ್ರೀ ಎ. ಲಕ್ಷ್ಮೀಸಾಗರ್.— ಏನೂ ತೊಂದರೆ ಇಲ್ಲ. ಅವರು ತೆಗೆದುಕೊಳ್ಳುತ್ತಾರೆ.

## ಬಂಗಾರಂಪೇಟೆ ಪುರಸಭೆಯಂ ಕುಡಿಯುವ ನೀರು ಸರಬರಾಜಿನ ಬಗ್ಗೆ

೩೪೪. ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ೧೯೪೭ನೇ ಸಾಲಿನಲ್ಲಿ ಬಂಗಾರಪೇಟೆಯ ಪುರಸಭಾ ವ್ಯಾಪ್ತಿಯಲ್ಲಿನ ಜನಸಂಖ್ಯೆ ಎಷ್ಟಿತ್ತು? ಹಾಗೂ ೧೯೮೫ನೇ ಸಾಲಿನಲ್ಲಿರುವ ಜನಸಂಖ್ಯೆ ಎಷ್ಟು?

ಆ) ಆಲ್ಲಿ ಕುಡಿಯುವ ನೀರನ್ನು ತಲಾವಾರು ಎಷ್ಟು ಗ್ಯಾಲನ್ ಕೊಡಲಾಗುತ್ತಿದೆ ಹಾಗೂ ಆಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ವ್ಯವಸ್ಥೆಯನ್ನು ಸರಿಪಡಿಸಲು ಕೈಗೊಂಡ ಕ್ರಮವೇನು?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ೧೯೪೭ನೇ ಸಾಲಿನಲ್ಲಿ ಬಂಗಾರಪೇಟೆ ಪುರಸಭೆ ವ್ಯಾಪ್ತಿಯಲ್ಲಿನ ಜನಸಂಖ್ಯೆ ಸುಮಾರು ೯,೦೦೦ ಇತ್ತು ಹಾಗೂ ೧೯೮೫ನೇ ಸಾಲಿನಲ್ಲಿರುವ ಜನಸಂಖ್ಯೆಯು ಸುಮಾರು ೩೦,೦೦೦ ಇದೆ.

ಆ) ಈ ಪಟ್ಟಣದಲ್ಲಿ ದಿನಂಪ್ರತಿ ತಲಾ ೧೦.೫೦ ಗ್ಯಾಲನ್ ಕುಡಿಯುವ ನೀರು ಒದಗಿಸಲಾಗುತ್ತಿದೆ.

ಬಂದಿದೆ.

ಇ) ಈ ಪಟ್ಟಣಕ್ಕೆ ೩೬.೦೦ ಲಕ್ಷ ರೂ. ಗಳ ಅಭಿವೃದ್ಧಿ ಯೋಜನೆ ಮಂಜೂರಾಗಿದ್ದು ಇದರ ಕೆಲಸಗಳು ಪ್ರಗತಿಯಲ್ಲಿವೆ.

ಈ ಅಭಿವೃದ್ಧಿ ಯೋಜನೆಯು ಪೂರ್ಣಗೊಂಡ ಬಳಿಕ ಪಟ್ಟಣದ ನೀರು ಸರಬರಾಜು ಉತ್ತಮವಾಗಲಿದೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ಬಂಗಾರಪೇಟೆ ನಗರದಲ್ಲಿ ಸರಾಸರಿ ೩೦ ಗ್ಯಾಲನ್ ನೀರು ಕೊಡಬೇಕು ಕಾವೆ ಈಗಾಗಲೇ ಹಾಕಿಕೊಂಡಿರತಕ್ಕ ಯೋಜನೆಯನ್ನು, ಯಾವ ನಿರ್ದಿಷ್ಟ ಕಾಲದಲ್ಲಿ ಪೂರೈಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ).— ಮಾನ್ಯ ಅಧ್ಯಕ್ಷರೇ, ನಾನು ಬೇಗ ಮಾಡುತ್ತೇನೆಂದು ಈಗಾಗಲೇ ಹೇಳಿದ್ದೇನೆ, ಕೆಲಸಗಳು ಈಗಾಗಲೇ ತ್ವರಿತಗತಿಯಲ್ಲಿ ನಡೆಯುತ್ತಿವೆ. ೫ ಕೊಳವೆ ಬಾವಿಗಳಿಂದ ಗಂಟೆಗೆ ೧೨,೬೦೦ ಗ್ಯಾಲನ್ ನೀರು ಒದಗುತ್ತಿದೆ. ಆ ಪಟ್ಟಣಕ್ಕೆ ೧೦.೫೦ ಗ್ಯಾಲನ್ ನೀರು ಕೊಡತಕ್ಕಂಥ ಕಾರ್ಯಕ್ರಮ ನಡೆಯುತ್ತಿದೆ. ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟಿದ್ದಾರೆ. ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಚುಕ್ಕೆ ಪ್ರಶ್ನೆ: ೫೨೪ (೧೩೨೮)
(ಮಾನ್ಯ ಸದಸ್ಯರು ಗೈರು ಹಾಜರು)
ಚುಕ್ಕೆ ಪ್ರಶ್ನೆ: ೫೨೫ (೯೪೫)
(ಮಾನ್ಯ ಸದಸ್ಯರು ಗೈರು ಹಾಜರು)